ಮಾರ್ಗವನ್ನು ತಾವು ತೆಗೆದುಕೊಳ್ಳಬೇಕು. ಇದು ಈಗಾಗಲೇ ಆಗಬೇಕಿತ್ತು. ಬಹಳ ವರ್ಷಗಳಿಂದ ಅಂಟಿರತಕ್ಕ ಖಾಯಿಲೆ ಇದು.

ಶ್ರೀ ಬಿ.ಹೆಚ್. ಬನ್ನಿಕೋಡ್:- ಸನ್ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶಗಳಲ್ಲಿ ಬಹಳಷ್ಟು ವಿದ್ಯುತ್ ಕೊರತೆ ಇದೆ.

ಛೇರ್ಮನ್:- ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ:- ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಕೊರತೆ ಬಹಳ ಇದೆ. ಅದರ ಬಗ್ಗೆ ಅವರು ಚರ್ಚೆ ಮಾಡುವುದರಲ್ಲಿ ತಪ್ಪೇನಿಲ್ಲ.

ಛೇರ್ಮನ್:- ಎಲ್ಲರೂ ಒಂದೇ ವಿಷಯ ಹೇಳುವುದರಲ್ಲಿ ಅರ್ಥವಿಲ್ಲ. ಎಷ್ಟು ಜನ ಮಾತನಾಡಿದರೂ ಒಂದೇ ವಿಷಯ. ಅನಾವಶ್ಯಕವಾಗಿ ಸಮಯವನ್ನು ಏಕೆ ಹಾಳು ಮಾಡಬೇಕು?

ಶ್ರೀ ಬಸವರಾಜ ರಾಯರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯಕ್ಕೆ ಟೈಮ್ ಕೊಡಲೇಬೇಕು. ಅವಶ್ಯಕತೆ ಇದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಸನ್ಮಾನ್ಯ ಅಧ್ಯಕ್ಷರೇ, ಸಚಿವರು ನಿನ್ನೆ ಆಕಸ್ಮಿಕವಾಗಿ, ಅನಿವಾರ್ಯವಾಗಿ ನಡೆದಂಥ ಘಟನೆಯ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ನೀರಾವರಿ ಮಾಡತಕ್ಕ ರೈತರ ಗೋಳು ಹೇಳತೀರದು. ಏಕೆಂದರೆ ಅಲ್ಲಿ ಕ್ಷಣ ಕ್ಷಣಕ್ಕೂ ವಿದ್ಯುಚ್ಛಕ್ತಿ ಹೋಗುತ್ತಿದೆ. ನಮ್ಮ ಉತ್ಪಾದನೆ ಏನಿದೆ ಅದರಲ್ಲಿ ನಿಶ್ಚಿತವಾದಂಥ ವೇಳೆಯನ್ನು ನಿಗದಿ ಪಡಿಸಿ ವಿದ್ಯುತ್ ಕೊಟ್ಟರೆ ನಮ್ಮ ರೈತರಿಗೆ ಏನಾದರೂ ಅಲ್ಪಸ್ವಲ್ಪ ಬೆಳೆ ಸಿಗಲು ಅನುಕೂಲವಾಗುತ್ತದೆ. ಅದೇರೀತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬಹಳ ಹತ್ತಿರ ಬಂದಿದೆ. ಓದಲಿಕ್ಕೆ ಬಹಳಷ್ಟು ತೊಂದರೆ ಆಗುತ್ತಿದೆ. ಪರೀಕ್ಷೆಗಳಿಗೆ ಕೂರಲೂ ತೊಂದರೆಯಾಗುತ್ತಿದೆ. ಕುಡಿಯುವ ನೀರಿಗೆ ಸಹಿತ ಇವತ್ತು ವಿದ್ಯುತ್ ಇಲ್ಲ. ಫ್ಲೋರ್ ಮಿಲ್‌ನಲ್ಲಿ ಹಿಟ್ಟು ಬೀಸಲಿಕ್ಕೆ ವಿದ್ಯುತ್ ಇಲ್ಲ ನಿಶ್ಚಿತ ಅವಧಿಯಲ್ಲಾದರೂ ೬ ತಾಸು - ೮ ತಾಸು ವಿದ್ಯುತ್ ಕೊಡಬೇಕು. ಇದುವರಗೆ ಯಾವ ಯಾವ ಭಾಗಕ್ಕೆ ಮಾಡಲಿಕ್ಕೆ ಆಗಲಿಲ್ಲ, ಅಲ್ಲಿ ತಾವು ಮಾಡುತ್ತೀರೆಂಬ ವಿಶ್ವಾಸದಿಂದ ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ಉತ್ಪಾದಕರ ಜೊತೆಗೆ ಮಾತನಾಡಿ ನಿಶ್ಚಿತವಾದ ವೇಳೆಯಲ್ಲಿ ವಿದ್ಯುತ್ ಕೊಡುತ್ತೇವೆಂದು ಜನರಿಗೆ ಹೇಳೋಣ. ನಮ್ಮ ಪರಿಸ್ಥಿತಿ, ಉತ್ಪಾದನೇ ಈ ರೀತಿ ಇದೆ, ಈ ವೇಳೆಯಲ್ಲಿ ತೆಗೆದುಕೊಳ್ಳಿ ಉಳಿದ ವೇಳೆಯಲ್ಲಿ ಬೇರೆಯವರಿಗೆ ಕೊಡೋಣ ಸಹಕರಿಸಿ ಎಂದು ಹೇಳಿ, ಇದ್ದ ಸ್ಥಿತಿಯಲ್ಲಿ ಯೋಗ್ಯ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

೨. ಡಾ.ಯು.ಆರ್. ಅನಂತಮೂರ್ತಿಯವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡಿರುವ ಕುರಿತು ಶ್ಲಾಘನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷೆಣಿಯವರೇ, ನಾನು ಅಧ್ಯಕ್ಷರ ಜೊತೆಯಲ್ಲಿ ಸಮಾಲೋಚನೆ ಮಾಡಿ ಈ ಸಭೆಗೆ ಬರಲಿಕ್ಕೆ ಮುಂಚೆ ಒಂದು ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ಹೇಳಿ ಅಧ್ಯಕ್ಷರ ಪರವಾನಿಗಿ ಪಡೆದಿದ್ದೇನೆ. ಆದರೂ ಬಹಳ ಹೆಮ್ಮೆಯಿಂದ ವಿಷಯವನ್ನು ಪ್ರಸ್ತಾಪ ಮಾಡಿ ಎಂದು ಹೇಳಿದ್ದಾರೆ. ಇಡೀ ಕರ್ನಾಟಕದ ನಾಲ್ಕು ಕೋಟಿ ಜನ ಹೆಮ್ಮೆ ಪಡತಕ್ಕಂಥ ವಿಚಾರ. ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಕನ್ನಡ ಪ್ರಖ್ಯಾತ ಬರಹಗಾರರು ಆಗಿರತಕ್ಕಂಥ ಡಾ. ಯು.ಆರ್.

ಅನಂತಮೂರ್ತಿಯವರು ಇಡೀ ನಮ್ಮ ಕರ್ನಾಟಕ ರಾಜ್ಯ, ಕನ್ನಡ ನಾಡು ಅಷ್ಟೇ ಅಲ್ಲ, ನಾವೆಲ್ಲರೂ ಅಷ್ಟೇ ಅಲ್ಲ ಇಡೀ ದೇಶ ಹೆಮ್ಮೆ ಪಡತಕ್ಕಂಥ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ನೇಮಕವಾಗಿರತಕ್ಕಂಥದ್ದು ನಮ್ಮೆಲ್ಲರಿಗೂ ಬಹಳ ಸಂತೋಷ ಹಾಗೂ ಆನಂದವನ್ನು ಉಂಟುಮಾಡಿರತಕ್ಕಂಥ ಒಂದು ವಿಚಾರ. ವಿಚಾರವಾದಿಗಳೂ ಆಗಿರತಕ್ಕಂಥ ಡಾ. ಯು.ಆರ್. ಅನಂತಮೂರ್ತಿಯವರು ಶಿವಮೊಗ್ಗ ಜಿಲ್ಲೆಯವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ತಮ್ಮದೇ ಆದ ಚಿಂತನೆಯನ್ನು ಇಟ್ಟುಕೊಂಡಿದ್ದ ಮಹಾನ್ ವಿದ್ವಾಂಸರು, ಕೇರಳದ ಗಾಂಧೀ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಬಹಳ ದೊಡ್ಡ ಸೇವೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಒಬ್ಬ ಚಿಂತಕರಾಗಿ ಮತ್ತು ಸಮಾಜ ಯಾವ ರೀತಿ ಹೋಗಬೇಕು ಎನ್ನತಕ್ಕ ದೃಷ್ಟಿಯಿಂದ ಅನೇಕ ತಮ್ಮದೇ ಆದ ವಿಚಾರಗಳನ್ನು ಇಟ್ಟುಕೊಂಡಿರತಕ್ಕಂಥ ಯು.ಆರ್. ಅನಂತಮೂರ್ತಿಯವರಿಗೆ, ಸಲ್ಲತಕ್ಕಂಥ ಒಂದು ಗೌರವ. ಇದು ರಾಜ್ಯದ ಪ್ರತಿಯೊಬ್ಬರಿಗೂ ಸಿಕ್ಕಿರತಕ್ಕಂಥ ಗೌರವವೆಂದು ನಾನು ತಿಳಿದಿದ್ದೇನೆ. ಈ ಸಂದರ್ಭದಲ್ಲಿ ಆಡಳಿತ ಪಕ್ಷದ, ಸರ್ಕಾರದ ಉಪ ಮುಖ್ಯಮಂತ್ರಿಗಳು ಇಲ್ಲಿರತಕ್ಕಂಥದ್ದು ಬಹಳ ಸಂತೋಷದ ವಿಚಾರ. ಆದರೂ ನಮ್ಮ ಜೊತೆಯಲ್ಲಿ ಧ್ವನಿಗೂಡಿಸುತ್ತಾರೆಂದು ನಾನು ತಿಳಿದಿದ್ದೇನೆ. ಈ ಸಂದರ್ಭದಲ್ಲಿ ಈ ರಾಜ್ಯದ ಉನ್ನತ ಸಭೆಯಾಗಿರತಕ್ಕಂಥ ವಿಧಾನ ಸಭೆಯ ಮೂಲಕವಾಗಿ ಅವರನ್ನು ಅಭಿನಂದಿಸೋಣ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ತಾವು ಸಹಿತ ಧ್ವನಿಗೂಡಿಸುತ್ತೀರೆಂದು ಹೇಳಿ, ನಾನು ವಿಶ್ವಾಸ ವ್ಯಕ್ತಪಡಿಸುತ್ತೇನೆ.

*ಶ್ರೀ ಆರ್.ವಿ. ದೇಶಪಾಂಡೆ:- ಡಾ. ಯು.ಆರ್. ಅನಂತಮೂರ್ತಿಯವರ ಅಯ್ಕೆ ನಮ್ಮೆಲ್ಲರಿಗೂ ಗೌರವ ಮತ್ತು ಹೆಮ್ಮೆ. ಅವರು ಅಕಾಡೆಮಿಯ ಅಧ್ಯಕ್ಷರಾಗಿದ್ದಾರೆ. ಮೊದಲನೆಯ ಬಾರಿ ಒಬ್ಬ ಕನ್ನಡಿಗರು ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ ಇದು ನಮ್ಮೆಲ್ಲರಿಗೂ ಒಂದು ಗೌರವ ತಂದಿದೆ, ನಮ್ಮೆಲ್ಲರಿಗೂ ಹೆಮ್ಮೆಯ ಮಾತು. ನಾನು ಅವರನ್ನು ಅಭಿನಂದಿಸುತ್ತಾ, ಇಡೀ ಸದನ ಅವರನ್ನು ಅಭಿನಂದಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಸಹ ಇದಕ್ಕೆ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕನ್ನಡಿಗರಿಗೆ ಸಂದಿರತಕ್ಕ ಗೌರವ, ಇದು ಮೊದಲನೇ ಬಾರಿ ಅಲ್ಲ. ಹಿಂದೆ ಡಾ. ಪಿ.ಕೆ. ಗೋಕಾಕ್‌ರವರು ಇದ್ದರು. ಅನಂತರ ಈಗ ನಮ್ಮ ಡಾ. ಯು.ಆರ್. ಅನಂತಮೂರ್ತಿಯವರು ಅಧ್ಯಕ್ಷರಾಗಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರದ ಸಾಹಿತ್ಯ ಅಕಾಡೆಮಿಯಲ್ಲಿ ಕನ್ನಡಿಗರು ಇವರು ಒಬ್ಬರೇ ಒಬ್ಬರು ಅಧ್ಯಕ್ಷರಾಗಿದ್ದಾರೆ ಎಂಬ ಮಾತುಗಳು ಏನು ಬರುತ್ತಿದೆ, ಒಬ್ಬರು ಅಲ್ಲ ಹಿಂದೆ ಆಗಿದ್ದಾರೆ. ಈಗ ಯು.ಆರ್. ಅನಂತಮೂರ್ತಿಯವರು ಅಧ್ಯಕ್ಷರಾಗಿದ್ದಾರೆ. ಇದು ಏಕ್‌ದಮ್ ಕೇಂದ್ರ ಸರ್ಕಾರ, ಪ್ರಧಾನಿಯವರು ಅವರ ಜೇಬಿನಿಂದ ಕೊಟ್ಟಿದ್ದಲ್ಲ. ಅವರು ಚುನಾಯಿತರಾಗಿದ್ದಾರೆ. ಅವರು ಎಲ್ಲರ ಜೊತೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿ ಹೆಚ್ಚಿನ ಮತಗಳನ್ನು ಪಡೆದು ಗೆದ್ದಿದ್ದಾರೆ. ಅದು ನಾವು ಸಂತೋಷಪಡತಕ್ಕಂಥದ್ದು. ಅವರಲ್ಲಿ ಎರಡನೇ ವಾದ ಇಲ್ಲವೇ ಇಲ್ಲ. ಅವರ ಬಗ್ಗೆ ಈ ಸದನದಲ್ಲಿ ಒಳ್ಳೆಯ ಮಾತನಾಡತಕ್ಕಂಥದ್ದು ಸದ್ಭಾವನೆ. ಎರಡನೆಯ ಅಭಿಪ್ರಾಯ ಇಲ್ಲ. ಮತ್ತು ಅನಂತಮೂರ್ತಿಯವರು ಒಂದು ವಿಚಾರವಾದದ ವ್ಯಕ್ತಿತ್ವವುಳ್ಳವರು, ಮತ್ತು ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ಅವರು ಉಪಕುಲಪತಿಗಳಾಗಿದ್ದರು. ಅವರು ನಮಗೆ ಆತ್ಮೀಯ ಮಿತ್ರರೂ ಹೌದು. ಆದ್ದರಿಂದ ಅವರ ಬಗ್ಗೆ ಇಲ್ಲಿ ನಾವು ಗಂಭೀರವಾದ ಚಿಂತನೆ ನಡೆಸಿ ಅವರಿಗೆ ಅಭಿನಂದನೆಯನ್ನು ಸಲ್ಲಿಸತಕ್ಕದ್ದು ಈ ಸದನಕ್ಕೆ ಒಂದು ಒಳ್ಳೆಯ ಸಂಪ್ರದಾಯ ಎನ್ನತಕ್ಕಂತಹ ಮಾತನ್ನು ತಮಗೆ ಹೇಳುತ್ತೇನೆ.

*ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಯು.ಆರ್. ಅನಂತಮೂರ್ತಿಯವರಿಗೆ ಅವರ ಶ್ರೇಷ್ಠಗುಣಕ್ಕೆ ಮತ್ತು ಅವರ ಒಂದು ಪರಿಶ್ರಮಕ್ಕೆ ತಕ್ಕ

ಉನ್ನತ ಸ್ಥಾನ ಇವತ್ತು ಸಿಕ್ಕಿದೆ. ಇದು ಕನ್ನಡಿಗರೆಲ್ಲ ಹೆಮ್ಮೆ ಪಡತಕ್ಕಂಥದ್ದು. ಈಗಾಗಲೇ ವೈಯಕ್ತಿಕವಾಗಿ ನಮ್ಮ ಪಕ್ಷದ ಕಡೆಯಿಂದ ಅಭಿನಂದನೆ ಸಲ್ಲಿಸಿದ್ದೇವೆ. ಈ ಸದನದಲ್ಲೂ ಸಹ ಆ ರೀತಿ ಅಭಿನಂದನೆ ಸಲ್ಲಿಸುವುದು ನನ್ನ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ದಯಮಾಡಿ ಸರ್ವಾನುಮತದಿಂದ ಅವರಿಗೆ ಅಭಿನಂದನೆ ಸಲ್ಲಿಸುವಂಥ ನಿರ್ಣಯವನ್ನು ಸಹ ಮಾಡಬೇಕು.

*ಶ್ರೀ ಬಿ.ಎಂ. ಇದಿಬ್ಬಾ:- ಸನ್ಮಾನ್ಯ ಅಧ್ಯಕ್ಷಣಿಯರೆ, ಡಾ. ಯು.ಆರ್. ಅನಂತಮೂರ್ತಿಯವರು ದೇಶದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಆರಿಸಿಬಂದಿದ್ದಾರೆ. ಅವರು ಸ್ಪರ್ಧೆಯಲ್ಲಿ ನಿಂತು ಆರಿಸಿ ಬಂದಿರುವುದು ಕನ್ನಡನಾಡಿನ ನಮಗೆಲ್ಲರಿಗೂ ಬಹಳ ಸಂತೋಷದ ವಿಚಾರ. ಡಾ. ಅನಂತಮೂರ್ತಿಯವರ ಬಗ್ಗೆ ಮಾನ್ಯ ಸಿಂಧ್ಯರವರು ಹೇಳಿರುವಂತೆ ಅವರೊಬ್ಬ ಬಹಳ ದೊಡ್ಡ ಚಿಂತನಕಾರರು ಅವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ, ಇತ್ತೀಚೆಗೆ ಅವರು ಕೆಲವು ಕಾವ್ಯದ ಪುಸ್ತಕಗಳನ್ನೂ ಸಹ ಬರೆದು ಎಲ್ಲರ ಮೆಚ್ಚುಗೆಯನ್ನು ಗಳಿಸಿರತಕ್ಕಂಥ ಒಬ್ಬ ಚಿಂತಕ, ಅವರು ಸಾಹಿತಿ ಮತ್ತು ಕವಿಗಳಾಗಿದ್ದಾರೆ. ಅಂಥ ವ್ಯಕ್ತಿಗೆ ಇವತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷಸ್ಥಾನ ದೊರಕಿರುವುದು ಬಹಳ ಸಂತೋಷದ ವಿಚಾರ. ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದಂತೆ ಈ ಹಿಂದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನವನ್ನು ಶ್ರೀ ವಿ.ಕೃ. ಗೋಕಾಕರು ಅಲಂಕರಿಸಿದ್ದರು. ಆದರೆ ಈ ಬಾರಿ ಡಾ. ಯು.ಆರ್. ಅನಂತಮೂರ್ತಿಯವರು ಸ್ಪರ್ಧೆಯಲ್ಲಿ ನಿಂತು ಅತ್ಯಧಿಕ ಬಹುಮತದಿಂದ ಗೆದ್ದು ಬಂದಿದ್ದಾರೆ, ಇದು ನಮಗೆಲ್ಲರಿಗೂ ಬಹಳ ಸಂತೋಷವನ್ನು ಕೊಟ್ಟಿದೆ. ನಮ್ಮ ಕನ್ನಡ ನಾಡಿನ ಸಾಹಿತಿಗಳು, ಕವಿಗಳು, ಎಷ್ಟೊಂದು ಮೇಧಾವಿಗಳು, ಎಷ್ಟೊಂದು ಮುತ್ಸದ್ದಿಗಳು, ಎಷ್ಟೊಂದು ಜನಪ್ರಿಯರು ಎಂಬುದನ್ನು ಇಡೀ ದೇಶಕ್ಕೆ ಇದು ತೋರಿಸಿಕೊಟ್ಟಿದೆ. ಆದುದರಿಂದ ಅವರನ್ನು ನಾನು ಈ ಸಂದರ್ಭದಲ್ಲಿ ಸಂತೋಷದಿಂದ ಅಭಿನಂದಿಸುತ್ತೇನೆ ಮತ್ತು ಇಡೀ ಸದನ ಅದಕ್ಕೆ ಒಪ್ಪಿಗೆ ಕೊಡತಕ್ಕಾದ್ದು ಬಹಳ ಸೂಕ್ತವಾದುದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಕೆ. ಶಿವಮೂರ್ತಿ:- ಸನ್ಮಾನ್ಯ ಅಧ್ಯಕ್ಷಿಣಿಯರೆ, ಯು.ಆರ್. ಅನಂತಮೂರ್ತಿಯವರು ನಾವುಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದಬೇಕಾಗಿದ್ದರೆ ಗುರುಗಳಾಗಿದ್ದರು. ನಮ್ಮದೇ ಆಗಿರತಕ್ಕ ಪ್ರತ್ಯೇಕವಾದ ವಿದ್ಯಾರ್ಥಿ ಕೂಟವನ್ನು ಇಟ್ಟು Progressive thinking ಬಗ್ಗೆ ವಿಚಾರ ಮಾಡತಕ್ಕ ವೇದಿಕೆಯನ್ನಿಟ್ಟು ನಮ್ಮ ಗುರುಗಳು ಅವರು. ಅವರಿಗೆ ಈ ಒಂದು ಸ್ಥಾನ ಸಿಕ್ಕಿರತಕ್ಕದ್ದು ನಮ್ಮ ಇಡೀ ಕರ್ನಾಟಕದ ಜನತೆಯ ಹಿರಿಮೆಯಿಂದ ಹೇಳಿಕೊಳ್ಳಬೇಕಾಗುತ್ತದೆ. ಡಾ. ಅನಂತಮೂರ್ತಿಯವರು ಕೇವಲ academic line ನಲ್ಲಿ ಚಿಂತನೆ ಮಾಡುವುದರ ಜೊತೆಗೆ ದುರ್ಬಲರು ಮತ್ತು ತುಳಿತಕ್ಕೆ ಈಡಾಗಿರತಕ್ಕವರ ಬಗ್ಗೆ ಮತ್ತು ಈವತ್ತಿನ ಸಮಾಜದ ಸ್ಥಿತಿಗತಿಗಳ ಬಗ್ಗೆ ಯೋಚನೆಯನ್ನು ಮಾಡತಕ್ಕ ಲೆಫ್ಟಿಸ್ಟಿಕ್ ಓರಿಯಂಟೆಡ್ ಥಿಂಕಿಂಗ್ ಇಟ್ಟುಕೊಂಡಿರತಕ್ಕ ಡಾ. ಅನಂತಮೂರ್ತಿಯವರಿಗೆ ಸಂದಿರತಕ್ಕಂಥ ಗೌರವ ಇದು. ಅವರಿಗೆ ಬಹಳ ಒಳ್ಳೆಯಸ್ಥಾನ ಸಿಕ್ಕಿರುವುದಕ್ಕಾಗಿ ನಾವೆಲ್ಲರೂ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಈ ಅಭಿನಂದನೆಯನ್ನು ಈ ಸಂದರ್ಭದಲ್ಲಿ ಅವರಿಗೆ ಸಲ್ಲಿಸಬೇಕು ಮತ್ತು ಈ ಸಭೆಯಲ್ಲಿ ಕೈಗೊಂಡ ಅಭಿನಂದನಾ ನಿರ್ಣಯದ ಪ್ರತಿಯನ್ನು ಅವರಿಗೆ ಕಳಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ(ಉಪ ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷಿಣಿಯರೆ, ಡಾ. ಯು.ಆರ್. ಅನಂತಮೂರ್ತಿಯವರಿಗೆ ಸಂದಿರತಕ್ಕ ಈ ಗೌರವವು ಇಡೀ ಕನ್ನಡ ನಾಡಿಗೆ ಮತ್ತು ನುಡಿಗೆ ಸಂದಿರತಕ್ಕ ಗೌರವವೆಂದು ಪ್ರತಿಪಾದನೆ ಮಾಡುವ ಇಚ್ಛೆ ನನ್ನದು. ಮಾನ್ಯ ಸಿಂಧ್ಯರವರು ಮತ್ತು ವಿರೋಧ ಪಕ್ಷದ ನಾಯಕರು ಮತ್ತಿತರ ಸನ್ಮಾನ್ಯ ಸದಸ್ಯರುಗಳು

ಹೇಳಿದಂತೆ ಡಾ. ಅನಂತಮೂರ್ತಿಯವರು ಸಾಹಿತ್ಯ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಹೊಸ ಹೊಸ ಆಲೋಚನೆಗಳಿಗೆ ಆಯಾಮಗಳನ್ನು ನಿರ್ಮಾಣ ಮಾಡಿರತಕ್ಕ ಒಬ್ಬ ವಿಚಾರವಂತ ಲೇಖಕ ಮತ್ತು ಚಿಂತನ ಕಾರ. ಅದರಲ್ಲಿಯೂ ಕನ್ನಡ ನುಡಿಗೆ ಆತ್ಮಾಭಿಮಾನದ ಕವಚವನ್ನು ಕೂಡ ಅವರು ತೊಡಿಸಲು ತಮ್ಮ ಕೈಯಲ್ಲಾದ ಪ್ರಯತ್ನ ಮಾಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಅವರು ಆಯ್ಕೆಯಾಗಿರತಕ್ಕದ್ದು ನಮ್ಮ ಕನ್ನಡ ನಾಡಿಗೆ ಸಂದ ಭಾಗ್ಯ. ಈ ಸದನದ ಎಲ್ಲರ ಪರವಾಗಿ ನಾವು ಡಾ. ಯು.ಆರ್. ಅನಂತಮೂರ್ತಿಯವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ.

೩. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಬದಲು ಬೇರೆ ವಿಷಯವನ್ನು ಪ್ರಸ್ತಾಪಿಸಿರುವುದರಿಂದ ಕಾಲಾವಕಾಶಕ್ಕೆ ತೊಂದರೆ.

ಶ್ರೀ ಹೆಚ್. ವಿಶ್ವನಾಥಯ್ಯ:- ಸನ್ಮಾನ್ಯ ಅಧ್ಯಕ್ಷಣಿಯರೆ, ಈಗ ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಈ ದಿವಸ ನಾವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ಮುಂದುವರಿಸುತ್ತಿದ್ದೇವೆ. ತಮಗೆಲ್ಲಾ ಗೊತ್ತಿರುವ ಹಾಗೆ, ಸಂವಿಧಾನದ ೧೭೬ನೇ ಪರಿಚ್ಛೇದ ವಿಧಿಯ ಅನ್ವಯ ರಾಜ್ಯಪಾಲರು ಈ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಆ ಭಾಷಣದ ಮೇಲಿನ ಚರ್ಚೆಗೋಸ್ಕರ ಈಗಾಗಲೆ ಸಮಯವನ್ನು ನಿಗದಿ ಮಾಡಿದ್ದಾರೆ. ಆ ರೀತಿ ನಿಗದಿ ಮಾಡಿದಂಥ ದಿನಗಳಲ್ಲಿ ಯಾವ ಸ್ವರೂಪದ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ನಾವು ಈಗಾಗಲೇ ನಿಯಮಗಳನ್ನು ಮಾಡಿಕೊಂಡಿದ್ದೇವೆ. ಮತ್ತು ಕೌಲ್ ಅಂಡ್ ಶಕದರ್ ಅವರ ಪುಸ್ತಕದಲ್ಲೂ ಸಹ ಈ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅವರು ಪ್ರಸ್ತಾಪ ಮಾಡಿರುವಂತೆ ಮತ್ತು ನಮ್ಮ ನಿಯಮಗಳ ಅಡಿಯಲ್ಲಿ ನಾವು ಔಪಚಾರಿಕ ಸ್ವರೂಪದ ಕಾರ್ಯಕಲಾಪಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಕಾರ್ಯಕಲಾಪಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸಂವಿಧಾನದ ೧೭೬ನೇ ವಿಧಿಯನ್ವಯ ಏನು ವರ್ಷದ ಪ್ರಥಮ ಅಧಿವೇಶನವನ್ನು ಮಾನ್ಯ ರಾಜ್ಯಪಾಲರು ಉದ್ದೇಶಿಸಿ ಭಾಷಣ ಮಾಡುತ್ತಾರೆ ಆ ಭಾಷಣದ ಮೇಲೆ ಚರ್ಚೆ ಮಾಡಲಿಕ್ಕೆ ನಿಯಮಗಳನ್ನು ರೂಪಿಸಿಕೊಳ್ಳಲಿಕ್ಕೆ ಅವಕಾಶ ಇದೆ. "Provision shall be made by the rules regulating the procedure of the house or either of the houses for allotment time for discussion of the matters referred to in such address." ಈ ವಿಧಿಯನ್ವಯ ಕರ್ನಾಟಕ ರಾಜ್ಯದ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳನ್ವಯ ನಾವು ನಿಯಮಗಳನ್ನು ಮಾಡಿಕೊಂಡಿದ್ದೇವೆ. ಆ ನಿಯಮದ ಪ್ರಕಾರ ೫೫ನೇ ಪರಿಚ್ಛೇದದಲ್ಲಿ ಹೇಳಿರುವ ರೀತಿಯಲ್ಲಿ ನಿಯಮ ೨೨, ೨೦ ಅನ್ನು ಓದುತ್ತೇನೆ. ಮೊದಲು ೨೦ ಓದುತ್ತೇನೆ. " On such day or days or part of any day, the House shall be at liberty to duscuss the matters referred to in such Address on a motion of Thanks moved by a Member and seconded by another Member.

Rule 22: Notwithstanding that, a day has been allotted for discussion on the Governor's Address."

ಯಾವ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಾವು ನಿಯಮ ೨೨ ಅನ್ನು ರೂಪಿಸಿಕೊಂಡಿದ್ದೇವೆ. ಆ ನಿಯಮದನ್ವಯ ನಾವು ಯಾವುದಾದರೂ ಒಂದು ವಿಧೇಯಕ ಅಥವಾ ವಿಧೇಯಕಗಳನ್ನು ಮಂಡಿಸಲು ಮಾತ್ರ ಅವಕಾಶ ಇದೆ. ಮತ್ತು ಜರೂರುಮಹತ್ವದ ವಿಷಯಗಳ ಬಗ್ಗೆ ನಿಲುವಳಿ ಸೂಚನೆಗೆ ಅನುಮತಿ ದೊರೆತರೆ ಅವುಗಳನ್ನು ಪ್ರಸ್ತಾಪ ಮಾಡಲಿಕ್ಕೆ